2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಕನಕಪುರ

ಸಿಸಿ ನಂಃ 453 /2011

| | | | |
|---|---|---|---|
| ಚಾಸಾ ಃ | 5 | ಪ್ರಾಸಾಃ- | 3 |

| | |
|---|---|
| ಹೆಸರು | ಲೋಕೇಶ್ |
| ತಂದೆಯ ಹೆಸರು / ಗಂಡನ ಹೆಸರು | ಶಿವಲಿಂಗಯ್ಯ |
| ವಯಸ್ಸು | 39 |
| ಉದ್ಯೋಗ | ಸಿಆರ್‌ಪಿಎಫ್ ಫ್ಯಾಕ್ಟರಿ ಕೆಲಸ |
| ವಿಳಾಸ | ಹಾಲಿ ವಾಸ ಚೆನ್ನೈ |

- - - - - - - - - - - - - - - - - - - - - - - - - - - - -

ದಿಃ 28.03.2017ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಆರೋಪಿಗಳು ನನಗೆ ಪರಿಚಯ. ಚಾಸಾ-1 ನನ್ನ ಅಣ್ಣ ಚಾಸಾ-2 ನನ್ನ ತಂದೆ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅತ್ತಿಗೆ, ಚಾಸಾ-6 ನನ್ನ ಪತ್ನಿ. ಚಾಸಾ-1ರಿಂದ 4, 6 ಹಾಗೂ ನನಗೆ ಮತ್ತು ಆರೋಪಿಗಳಿಗೆ ದಿ.25-8-10ರಂದು ಗಲಾಟೆ ಆಗಿರುತ್ತದೆ. ಅದೇ ದಿನ ನಾನು ಮತ್ತು ಚಾಸಾ-6 ಬೆಂಗಳೂರಿನಿಂದ ನಮ್ಮ ಊರಾದ ದೊಡ್ಡಮುದುವಾಡಿಗೆ ಸಂಜೆ 6ಗಂಟೆಗೆ ಬಂದೆವು. ನನ್ನ ತಂದೆ ಮನೆಯಿಂದ ಹೊರಗೆ ಹೋಗುತ್ತಿದ್ದಾಗ ಆರೋಪಿಗಳು ಬಂದು ನನ್ನ ತಂದೆಗೆ ಬೈಯುತ್ತಿದ್ದರು. ಗಲಾಟೆ ಕೇಳಿ ನನ್ನ ತಾಯಿ ಚಾಸಾ-3 ಅಲ್ಲಿಗೆ ಹೋದರು. ಆಗ ಆರೋಪಿಗಳು ರಾಡು, ಮಚ್ಚು , ಮತ್ತು ರೀಪೀಸ್ ಪಟ್ಟಿಯಿಂದ ನನ್ನ ತಾಯಿಯ

ಬಲಕಾಲು, ತಲೆ, ಬೆನ್ನು, ಬಲಗೈ ಹಾಗೂ ಕುಂಡಿಯ ಮೇಲೆ ಹೊಡೆದಿರುತ್ತಾರೆ. ಹೊಡೆತಕ್ಕೆ ರಕ್ತಗಾಯವುಂಟಾಗಿರುತ್ತದೆ ಹಾಗೂ ಅವರಿಗೆ ನಡೆಯಲು ಆಗುತ್ತಿರಲಿಲ್ಲ. ತಲೆಗೆ ಏಟಾಗಿದ್ದು ಬ್ಯಾಂಡೇಜ್ ಹಾಕಲಾಗುತ್ತದೆ. ಗಲಾಟೆ ಕಾಲಕ್ಕೆ ಶಬ್ದ ಕೇಳಿ ಮನೆಯಿಂದ ಹೊರಕ್ಕೆ ಬಂದೆ. ಆಗ ಆರೋಪಿಗಳು ಮಚ್ಚು ರಾಡು ರೀಪೀಸ್ ಪಟ್ಟಿಯಿಂದ ನನ್ನ ಎಡ ಕೈಗೆ, ತಲೆಗೆ, ಕಾಲುಗಳಿಗೆ ಹೊಡೆದು ತೀವ್ರ ಗಾಯ ಮಾಡಿರುತ್ತಾರೆ. ನನ್ನ ತಲೆಗೆ ಏಟಾಗಿದ್ದು 6 ಸ್ಟಿಚ್ ಹಾಕಲಾಗಿದೆ. ಆಗ ಅಲ್ಲಿಗೆ ಬಂದ ಚಾಸಾ-1ರವರಿಗೆ ಆರೋಪಿಗಳು ಕಲ್ಲಿನಿಂದ ಹಲ್ಲಿಗೆ ಹೊಡೆದಿದ್ದು ಒಂದು ಹಲ್ಲು ಹೋಗಿರುತ್ತದೆ. ಹಲ್ಲಿನಿಂದ ತುಟಿಗಳಿಗೆ ಏಟಾಗಿರುತ್ತದೆ. ಚಾಸಾ-4ರವರು ಮನೆ ಒಳಗಿನಿಂದ ಬರುತ್ತಿದ್ದಾಗ ಮನೆಯೊಳಗೆ ನುಗ್ಗಿ ಚಾಸಾ-4ರವರಿಗೆ ರೀಪೀಸ್ ಪಟ್ಟಿ ಮಚ್ಚು ಮತ್ತು ರಾಡಿನಿಂದ ತಲೆ, ಕಾಲು, ಸೊಂಟಕ್ಕೆ ಹೊಡೆದು ಏಟು ಮಾಡಿರುತ್ತಾರೆ. ಹೊಡೆತಕ್ಕೆ ಅವರಿಗೆ ರಕ್ತಗಾಯವಾಗಿದ್ದು, ಪ್ರಜ್ಞೆ ತಪ್ಪಿದರು. ಕಾಲಿಗೆ ಹೊಡೆದಿದ್ದರಿಂದ ಅವರಿಗೆ ನಡೆಯಲು ಆಗುತ್ತಿರಲಿಲ್ಲ. ಹೊಡೆತಕ್ಕೆ ನನಗೆ ರಕ್ತಗಾಯವಾಗಿದ್ದು ನಡೆಯಲು ಆಗುತ್ತಿರಲಿಲ್ಲ. ಆರೋಪಿಗಳು ಮನೆಯೊಳಕ್ಕೆ ನುಗ್ಗಿ ಮನೆಯಲ್ಲಿದ್ದ ಬೀರುವಿನಿಂದ 500ಗ್ರಾಂ ಚಿನ್ನ ಹಾಗೂ 1ಲಕ್ಷ ರೂಪಾಯಿಯನ್ನು ಎತ್ತಿಕೊಂಡರು. ನಾವು ಕೇಳಲು ಹೋದಾಗ ಆರೋಪಿಗಳು ಮಚ್ಚನ್ನು ತೋರಿಸಿ ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಆಂಬುಲೆನ್ಸ್‌ನಲ್ಲಿ ನಾನು ಚಾಸಾ—1ರಿಂದ 4 ಮತ್ತು 6 ಆಸ್ಪತ್ರೆಗೆ ಹೋದೆವು. ಆರೋಪಿಗಳು ಗಲಾಟೆಯಲ್ಲಿ ನನ್ನ ತಾಯಿ ಹಾಗೂ ಅತ್ತಿಗೆಯ ಮಾಂಗಲ್ಯ ಸರವನ್ನು ಕಿತ್ತುರುತ್ತಾರೆ. ಸಾಕ್ಷಿ

ನ್ಯಾಯಾಲಯದ ಮುಂದಿರುವ ಎಂಓ-1ರಿಂದ 7ನ್ನು ನೋಡಿ ಗುರ್ತಿಸಿ ಅವುಗಳಿಂದ ಆರೋಪಿಗಳು ಹಲ್ಲೆ ಮಾಡಿರುವುದಾಗಿ ಹೇಳುತ್ತಾರೆ.

ಪಾಟೀ ಸವಾಲುಃ ಸಮಯ ಕೋರಿದ್ದು ನೀಡಲಾಯಿತು .

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ